( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ **30/01/2020**

**ಅಸಲು ದಾವೆ.ನಂ. 2/2013**

ಪಿ.ಡಬ್ಲ್ಯೂ 1

( ಪಾಟೀ ಸವಾಲುಃ ಶ್ರೀ ಆರ್.ಸಿ. ವಕೀಲರು 4 ಮತ್ತು 5 ನೇ ಪ್ರತಿವಾದಿಗಳ ಪರವಾಗಿ )

ನನ್ನ ಯಜಮಾನರ ಹೆಸರು ಚಂದ್ರಯ್ಯ. ನನ್ನ ಮದುವೆಯಾಗಿ 35 ವರ್ಷಗಳು ಆಗಿವೆ. ನಮ್ಮ ಗ್ರಾಮವಾದ ಬರ್ತೂರು ಗ್ರಾಮವನ್ನು ಮಾಗಡಿ ಹಳ್ಳಿ ಎಂತಲೂ ಕರೆಯುತ್ತಾರೆ ಎಂದರೆ ಸರಿ. ಜವರಮ್ಮನ ಮಗ ತಮ್ಮಣ್ಣ ಮತ್ತು ನನ್ನ ತಮ್ಮ ನಾಗರಾಜು ದಿಃ05-08-1995 ನೇ ಸಾಲಿನಲ್ಲಿ ಹಿಸ್ಸೆ ಮಾಡಿಕೊಂಡಾಗ ನನ್ನ ಯಜಮಾನರು ಹೋಗಿದ್ದರು ಎಂದರೆ ಸರಿ. ದಾವಾ ಸ.ನಂಃ 13/2 ರ ಸ್ವತ್ತಿನಲ್ಲಿ 1 ಎಕರೆ 34 ಗುಂಟೆ ಪೈಕಿ ನಾಗರಾಜು ರವರ ಹಿಸ್ಸೆ 37 ಗುಂಟೆ ಜಮೀನು ಬಂದಿದ್ದು, ಅದರಂತೆ ಅವರು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ದಾವಾ ಐಟಂ ನಂಃ 1 ಸ್ವತ್ತನ್ನು ನಾವುಗಳು ಉಳುಮೆ ಮಾಡಿಕೊಂಡು ಬರುತ್ತಿದ್ದೇವೆ.

ದಾವಾ ಐಟಂ ನಂಃ 1 ಸ್ವತ್ತಿನ ದಕ್ಷಿಣಕ್ಕೆ ತಮ್ಮಣ್ಣನವರ ಸ್ವತ್ತು ಬರುತ್ತದೆ ಎಂದರೆ ಸಾಕ್ಷಿಯು ಪೂರ್ವಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ದಿಃ05-08-1995 ರಲ್ಲಿ ವಿಭಾಗವಾದಾಗ ಹಿಸ್ಸೆ ಪಾಲು ಪಟ್ಟಿಯನ್ನು ನನ್ನ ಯಜಮಾರು ಬರೆದು ಸಹಿ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರಿಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆ ಸಮಯದಲ್ಲಿ ನನ್ನ ಯಜಮಾರು ಬರೆದ ಪಾಲುಪಟ್ಟಿಗೆ ನನ್ನ ಅಣ್ಣ ತಮ್ಮಣ್ಣ ಮತ್ತು ನನ್ನ ತಮ್ಮ ನಾಗರಾಜು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಿಸ್ಸೆಯ ಪಟ್ಟಿಯಂತೆ ತಮ್ಮಣ್ಣನವರು ಹೆಸರಿಗೆ 37 ಗುಂಟೆ ಮತ್ತು ನಾಗರಾಜುರವರ ಹೆಸರಿಗೆ 37 ಗುಂಟೆ ಜಮೀನು ಖಾತೆಯಾಯಿತು ಎಂದರೆ ಸರಿ. ನನ್ನ ಯಜಮಾನರು ನಿಂತು ತಮ್ಮಣ್ಣ ಮತ್ತು ನಾಗರಾಜುರವರಿಗೆ ಖಾತೆ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿ.

ತಮ್ಮಣ್ಣನವರ ಹಿಸ್ಸೆಗೆ ಹೋದ ಜಮೀನಿನ ಚೆಕ್ಕು ಬಂದಿ ಪೂರ್ವಕ್ಕೆ ಸಣ್ಣಯ್ಯನ ಜಮೀನು, ಪಶ್ಚಿಮಕ್ಕೆ ಜನತಾ ಮನೆಗಳು, ಉತ್ತರಕ್ಕೆ ನಾಗರಾಜುರವರ ಹಿಸ್ಸೆಗೆ ಬಂದ ಜಮೀನು, ದಕ್ಷಿಣಕ್ಕೆ ಕುಳ್ಳಪುಟ್ಟನವರ ಜಮೀನು ಎಂದರೆ ಸರಿ. ನಾಗರಾಜುರವರ ಹಿಸ್ಸೆಗೆ ಹೋದ ಜಮೀನಿನ ಚೆಕ್ಕು ಬಂದಿ ಪೂರ್ವಕ್ಕೆ ಸಣ್ಣಯ್ಯನ

ಜಮೀನು, ಪಶ್ಚಿಮಕ್ಕೆ ಜನತಾ ಮನೆಗಳು, ಉತ್ತರಕ್ಕೆ ಕೆರೆ, ದಕ್ಷಿಣಕ್ಕೆ ತಮ್ಮಣ್ಣನವರ ಹಿಸ್ಸೆಗೆ ಬಂದ ಜಮೀನು ಎಂದರೆ ಸರಿ. 4 ನೇ ಪ್ರತಿವಾದಿ ನಾಗರಾಜುರವರ ಹೆಂಡತಿ ಮತ್ತು 5 ನೇ ಪ್ರತಿವಾದಿ ನಾಗರಾಜು ಮತ್ತು 4 ನೇ ಪ್ರತಿವಾದಿಯ ಮಗು ಎಂದರೆ ಸರಿ. ಆ ಮಗುವನ್ನು ಬೇಬಿ ಎಂದು ವಾದ ಪತ್ರದಲ್ಲಿ ತಿಳಿಸಿದ್ದು, ಆ ಮಗುವಿನ ಹೆಸರು ಐಶ್ವರ್ಯ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.